**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>**

**<u>ಸಿ.ಸಿ.ನಂ.93/2026</u>**

**ಪಿರ್ಯಾದಿ** : ರಾಜ್ಯ ಸರ್ಕಾರ,
ಶ್ರೀಮಂಗಲ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : ಶ್ರೀಮತಿ ಚೋಕಿರ ತಿಮ್ಮಯ್ಯ,
ತಂದೆಃ ಪೌತಿ ಅಪ್ಪಣ್ಣ,
ಪ್ರಾಯ 61 ವರ್ಷ
ವಾಸಃ ಕುಮಟೂರು ಗ್ರಾಮ,
ಶ್ರೀಮಂಗಲ, ಕೊಡಗು.

**<u>ಆರೋಪಣೆ</u>**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 08.01.2026 ರಂದು ಸಮಯ ಸಂಜೆ 07.20 ಗಂಟೆಗೆ ಶ್ರೀಮಂಗಲ ಪೋಲೀಸ್ ಠಾಣಾ ಸರಿಹದ್ದಿಗೆ ಸೇರಿದ ಕುಮಟೂರು ಗ್ರಾಮದಲ್ಲಿ ಆರೋಪಿಯಾದ ನೀವು ತಮ್ಮ ಭಾಪ್ತು ದಿನಸಿ ಅಂಗಡಿಯ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಸರ್ಕಾರದ ಯಾವುದೇ ಪರವಾನಗಿ ಇಲ್ಲದೆ 90ml ನ Original choice Delux Whisky ಯ 4 ಟೆಟ್ರಾ ಪ್ಯಾಕೇಟ್ ಗಳು, 90ml ನ Original choice Delux Whisky ಯ ಒಂದು ಖಾಲಿ ಟೆಟ್ರಾ ಪ್ಯಾಕೇಟ್ ಹಾಗೂ ಅರ್ಧ ಲೀಟರಿನ ನೀರಿನ ಬಾಟಲಿ, ಒಂದು ಜ್ಯೂಸ್ ಬಾಟಲಿ ಮತ್ತು ಒಂದು ಪ್ಲಾಸ್ಟಿಕ್ ಲೋಟವನ್ನು ತಮ್ಮ ವಶದಲ್ಲಿಟ್ಟುಕೊಂಡು ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಅಕ್ರಮವಾಗಿ ಮದ್ಯವನ್ನು ಕುಡಿಯಲು ಅನುವು ಮಾಡಿ ಕೊಟ್ಟಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಕಲಂ 15(ಎ) ಮತ್ತು 32(3) ಕೆ.ಇ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುವಿರಿ.

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆ ಸಂಖ್ಯೆಃ 1 ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೇ?

ಉತ್ತರಃ ಅರ್ಥವಾಯಿತು.

ಪ್ರಶ್ನೆ ಸಂಖ್ಯೆ 2: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ ?

ಉತ್ತರಃ **ತಪ್ಪಾಯಿತು, ದಂಡ ಕಟ್ಟುತ್ತೇನೆ.**

ಮೇಲ್ಕಂಡ ಎಲ್ಲಾ ಆಪಾಧನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ಸ್ಥಳಃ ಪೊನ್ನಂಪೇಟೆ,

ದಿಃ07-04-2026

Sd/-

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.